15

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 9/7/2020

### ನಗರಕ್ಕೆ ಬರುವ ವಲಸೆ ಕಾರ್ಮಿಕರು, ವಿದ್ಯಾರ್ಥಿಗಳಿಗೆ ಸರಕಾರದಿಂದ ವಸತಿ ಸೌಕರ್ಯ

# ಸರಕಾರದಿಂದ ಅಗ್ಗದ ಬಾಡಿಗೆ ಮನೆ

■ **ಪಿಟಿಐ** ಹೊಸದಿಲ್ಲಿ

ನಗರ ಮತ್ತು ಪಟ್ಟಣಗಳಿಗೆ ವಲಸೆ ಬರುವ ಕಾರ್ಮಿಕರಿಗೆ ಕಡಿಮೆ ದರದಲ್ಲಿ ಬಾಡಿಗೆ ವಸತಿ ಕಲ್ಪಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಈ ಬಾಡಿಗೆ ವಸತಿ ಸಂಕೀರ್ಣಗಳನ್ನು(ಎಆರ್‌ಎಚ್‌ಸಿ) ಒಟ್ಟು 600 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತದೆ. ಹಳ್ಳಿಗಳಿಂದ ನಗರಗಳಿಗೆ ಉದ್ಯೋಗ ನಿಮಿತ್ತ ವಲಸೆ ಬರುವ ಕಾರ್ಮಿಕರಿಗೆ ಕಡಿಮೆ ಬಾಡಿಗೆಗೆ ಈ ವಸತಿ ಸೌಕರ್ಯ ಸಿಗಲಿದೆ ಎಂದು ಸರಕಾರ ಹೇಳಿದೆ.



- ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳು ತಮ್ಮದೇ ಜಾಗದಲ್ಲಿ ಈ ಯೋಜನೆಯಡಿಯಲ್ಲಿ ವಸತಿ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸಿದರೆ ಸರಕಾರದಿಂದ ವಿಶೇಷ ಪ್ರೋತ್ಸಾಹ ಧನ
- ಒಟ್ಟು 3.5 ಲಕ್ಷ ಮಂದಿಗೆ ಈ ಯೋಜನೆಯಿಂದ ಅನುಕೂಲವಾಗುವ ನಿರೀಕ್ಷೆ ಇದ.
- ಕಾರ್ಮಿಕರು ಮಾತ್ರವಲ್ಲದೆ ಗ್ರಾಮಾಂತರ ಪ್ರದೇಶಗಳಿಂದ ನಗರಗಳಿಗೆ ಬರುವ ವಿದ್ಯಾರ್ಥಿಗಳೂ ಪ್ರಯೋಜನ ಪಡೆಯಬಹುದು.
- ನಗರಗಳಲ್ಲಿ ವಲಸಿಗ ಕಾರ್ಮಿಕರು ವೆಚ್ಚ ಉಳಿತಾಯದ ಸಲುವಾಗಿ ಕೊಳಚೆ ಪ್ರದೇಶಗಳಲ್ಲಿ, ಅಕ್ರಮ ಬಡಾವಣೆಗಳಲ್ಲಿ ವಾಸಿಸುತ್ತಾರೆ. ಇದರ ತಡೆಗೆ ಯೋಜನೆ ಸಹಾಯಕ.

## ಪಿಎಫ್ ಖಾತೆದಾರರಿಗೆ ಮತ್ತೆ 3 ತಿಂಗಳು ಸರಕಾರದ ನೆರವು

ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಸದಸ್ಯರಿಗೆ ಇದು ಸಿಹಿ ಸುದ್ದಿ. ಉದ್ಯೋಗಿಗಳ ಪಿಎಫ್ ಖಾತೆಗೆ ನೀಡುತ್ತಿರುವ ಹಣಕಾಸು ನೆರವನ್ನು ಮತ್ತೆ ಮೂರು ತಿಂಗಳಿನ ತನಕ ವಿಸ್ತರಿಸಲು ಕೇಂದ್ರ ಸರಕಾರ ನಿರ್ಧರಿಸಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯ ಅಡಿಯಲ್ಲಿ ಇಪಿಎಫ್ ಖಾತೆಗೆ ನೀಡುತ್ತಿರುವ ನೆರವನ್ನು 2020ರ ಜೂನ್‌ನಿಂದ ಆಗಸ್ಟ್ ತನಕ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. ಇಪಿಎಫ್ ಖಾತೆಗೆ ಉದ್ಯೋಗದಾತರು ನೀಡುವ ಶೇ.12 ಮತ್ತು ಉದ್ಯೋಗಿಗಳ ಪಾಲಿನ ಶೇ.12 ಸೇರಿ ಒಟ್ಟು ಶೇ.24ರಷ್ಟು ಪಾಲನ್ನು ಸರಕಾರ ಆಗಸ್ಟ್ ತನಕ ನೀಡಲಿದೆ. ''ಇದಕ್ಕಾಗಿ 4,860 ಕೋಟಿ ರೂ. ವೆಚ್ಚವಾಗಲಿದೆ. 72 ಲಕ್ಷ ಉದ್ಯೋಗಿಗಳಿಗೆ ಇದರ ಪ್ರಯೋಜನ ದೊರೆಯಲಿದೆ,'' ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ. ಇದುವರೆಗೆ ಏಪ್ರಿಲ್‌ನಲ್ಲಿ 74.3 ಕೋಟಿ, ಮೇನಲ್ಲಿ 74.75 ಕೋಟಿ ಹಾಗೂ ಜೂನ್‌ನಲ್ಲಿ 64.72 ಕೋಟಿ ಮಂದಿಗೆ ಪ್ರಯೋಜನ ಲಭಿಸಿದೆ.

ವಿ PF CORNER

**ಆದರೆ, ಇದು ಎಲ್ಲ ಉದ್ಯೋಗಿಗಳಿಗಲ್ಲ!**

ಸರಕಾರದ ಕೊಡುಗೆಯು ಎಲ್ಲ ಉದ್ಯೋಗಿಗಳಿಗೂ ಅನ್ವಯವಾಗುವುದಿಲ್ಲ. 100ರ ತನಕ ಉದ್ಯೋಗಿಗಳನ್ನು ಹೊಂದಿರುವ ಸಣ್ಣ ಕಂಪನಿಗಳ ನೌಕರರಿಗೆ ಅನ್ವಯವಾಗುತ್ತದೆ. ಇಲ್ಲವೇ, ಮಾಸಿಕ 15,000 ರೂ.ಗಿಂತ ಕಡಿಮೆ ವೇತನ ಇರುವ ಉದ್ಯೋಗಿಗಳಿಗೆ ಮಾತ್ರ.

### 81 ಕೋಟಿ ಜನರಿಗೆ ಫ್ರೀ ಪಡಿತರ

ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ 81 ಕೋಟಿ ಮಂದಿ ಪಿಡಿಎಸ್ ಫಲಾನುಭವಿಗಳಿಗೆ ಉಚಿತವಾಗಿ ಆಹಾರ ಧಾನ್ಯ ವಿತರಿಸುವ ಯೋಜನೆಯನ್ನು ನವೆಂಬರ್ ತನಕ ವಿಸ್ತರಿಸಲು ಸಂಪುಟ ಅಸ್ತು.

### ಉಜ್ವಲಾ ನೆರವು ಮುಂದುವರಿಕೆ

ಉಜ್ವಲಾ ಫಲಾನುಭವಿಗಳಿಗೆ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯ ಅಡಿಯಲ್ಲಿ ಸಿಗುತ್ತಿರುವ ಪ್ರಯೋಜನವನ್ನೂ ಜುಲೈ 1ರಿಂದ ಮತ್ತೆ ಮೂರು ತಿಂಗಳಿಗೆ ವಿಸ್ತರಿಸಲಾಗಿದೆ. ಇದಕ್ಕಾಗಿ ಸರಕಾರಕ್ಕೆ 13,500 ಕೋಟಿ ರೂ. ವೆಚ್ಚವಾಗಲಿದೆ.

### ವಿಮೆ ಕಂಪನಿಗಳಿಗೆ 12,450 ಕೋಟಿ

ಸಾರ್ವಜನಿಕ ವಲಯದ ಮೂರು ಸಾಮಾನ್ಯ ವಿಮೆ ಕಂಪನಿಗಳಿಗೆ 12,450 ಕೋಟಿ ರೂ. ಬಂಡವಾಳ ನೆರವನ್ನು ಸರಕಾರ ನೀಡಲಿದೆ. ಓರಿಯೆಂಟಲ್ ಇನ್ಶೂರೆನ್ಸ್ ಕಂಪನಿ, ನ್ಯಾಶನಲ್ ಇನ್ಶೂರೆನ್ಸ್ ಕಂಪನಿ, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಗೆ ನೆರವು ಲಭಿಸಲಿದೆ.